State. It has relaxed the Financial Discipline Bill. As per their direction we have done it.

ಶ್ರೀ ಡಿ.ಕೆಶಿವಕುಮಾರ್ :– ಬಿಲ್ ಬಗ್ಗೆ ಬ್ರೀಫ್ ಮಾಡಿ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯನ್ನು ತಂದಿರುವ ಉದ್ದೇಶ ಏನೆಂದರೆ, ಕ್ರಯ, ಪರಭಾರೆ ಮತ್ತು ವರ್ಗಾವಣೆಗೆ ಮುದ್ರಾಂಕ ಶುಲ್ಕ ಶೇ.7.5 ರಿಂದ ಶೇ.6ಕ್ಕೆ ನಾವು ಇಳಿಸುತ್ತಿದ್ದೇವೆ. ಇದರಿಂದ ಎಲ್ಲಾ ವರ್ಗದ ಜನರಿಗೆ ಪ್ರಯೋಜನವಾಗುತ್ತಿದೆ. ಗುತ್ತಿದೆ ಪತ್ರದ ಮೇಲೆ ಮುದ್ರಾಂಕ ಶುಲ್ಕದ ಸರಳೀಕರಣದಿಂದ ಮತ್ತು ಕಡಿಮೆ ಮಾಡಿರುವುದರಿಂದ ಇನ್ನು ಮೇಲೆ ರಿಜಿಸ್ಟ್ರೇಷನ್ ಜಾಸ್ತಿಯಾಗುತ್ತದೆ. ಮಾಲೀಕರಿಗೆ ಮತ್ತು ಬಾಡಿಗೆದಾರರಿಗೆ ವಿಶೇಷವಾದಂಥ ಒಂದು ಬದ್ಧತೆ ಬರುತ್ತದೆ. ಪರವಾನಿಗೆಯಲ್ಲಿ ಸರಳೀಕರಣ ಮತ್ತು ಮುದ್ರಾಂಕ ಶುಲ್ಕ ಕಡಿಮೆ ಮಾಡಿರುವುದರಿಂದ, ಸಾಮಾನ್ಯ ಜನಕ್ಕೆ ಇನ್ನಷ್ಟು ಉಪಯೋಗವಾಗುತ್ತದೆ. ದಾನಪತ್ರದಲ್ಲಿ ಆರ್ಟಿಕಲ್ 28 ವ್ಯವಸ್ಥಾ ಪತ್ರ ಕುಟುಂಬ ವ್ಯಾಪ್ತಿಯಲ್ಲಿ ತಂದೆ–ತಾಯಿಯನ್ನು ಸೇರಿಸಿರುವುದರಿಂದ, ಮಕ್ಕಳಿಂದ ದಾನ ಅಥವಾ ವ್ಯವಸ್ಥಾ ಪತ್ರದ ಮೇಲೆ ಮುದ್ರಾಂಕ ಶುಲ್ಕದ ರಿಯಾಯಿತಿ ಲಾಭ ಪಡೆಯಬಹುದಾಗಿದೆ. ಇದು ಮೊದಲು ಇರಲಿಲ್ಲ. ಅನುಚ್ಛೇಧ 45 (ಬಿ)ಯಲ್ಲಿ ಹಕ್ಕು ಬಿಡುಗಡೆ ಪತ್ರ, ಅಂದರೆ, ಕುಟುಂಬ ವ್ಯಾಪ್ತಿಯಲ್ಲಿ ಮೃತ ಸಹೋದರನ ಹೆಂಡತಿ ಮತ್ತು ಮಕ್ಕಳು ಸೇರಿಸಿರುವುದರಿಂದ ಮುದ್ರಾಂಕ ರಿಯಾಯತಿ ಲಾಭವನ್ನು ಪಡೆಯಬಹುದಾಗಿದೆ. See, just to simplify and to expand.

ಶ್ರೀ ಡಿ.ಕೆಶಿವಕುಮಾರ್ :– Expand ಮಾಡಿರತಕ್ಕಂಥದ್ದರಲ್ಲಿ ತಮ್ಮನ ಬದಲು ತಮ್ಮನ ಹೆಂಡತಿಯನ್ನು ಕೂಡ ಸೇರಿಸಿದ್ದೀರಲ್ಲವೇ?

ಶ್ರೀ ಎಸ್.ಸುರೇಶ್ ಕುಮಾರ್ :– ಸೇರಿಸಿದ್ದೇವೆ.

ಶ್ರೀ ಡಿ.ಕೆಶಿವಕುಮಾರ್ :– That is a family. Brother and Sister ಬದಲು..

ಶ್ರೀ ಎಸ್.ಸುರೇಶ್ ಕುಮಾರ್ :– ಫ್ಯಾಮಿಲಿಯಲ್ಲಿ ಇದನ್ನು ಅಡಿಷನಲ್ ಆಗಿ ಸೇರಿಸಲಾಗಿದೆ.

ಊ) <u>ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 2009</u>

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

" 2009ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 1 ರಿಂದ 3 ರವರೆಗೆ

ಅಧ್ಯಕ್ಷರು : "ಖಂಡ 1 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 1 ರಿಂದ 3 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಸಚಿವರು (ಕಂದಾಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

" 2009ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ಸೂಚಿಸಲಾಯಿತು.

ಐ) ಕರ್ನಾಟಕ ಧನವಿನಿಯೋಗ(ಸಂಖ್ಯೆ:1) ವಿಧೇಯಕ, 2009
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : 2009ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :– ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಟಿ.ಬಿ.ಜಯಚಂದ್ರ :– ಅಧ್ಯಕ್ಷರು : ನೀವು ಈಗ Supplemtary Estimate ಅನ್ನು ತಂದಿದ್ದೀರಿ. ನೀವು ಯಾವುದಕ್ಕೆ ಖರ್ಚು ಮಾಡುತ್ತಿದ್ದೀರೆಂದರೆ, again it is non-plan expenditure only. Salary, Maintenance, Car purchases, Furniture and Purchase of Vehivles ಗೆ ಸುಮಾರು 6 ಸಾವಿರ ಕೋಟಿ ರೂಪಾಯಿಗಳ Supplementary Estimate ಅನ್ನು ತಂದಿದ್ದೀರಿ. ಅಂದರೆ, ಇದಕ್ಕೆಲ್ಲಾ ಕೊಡುವುದಕ್ಕಾಗಿಯೇ? It only increases the Non-plan expenditure. ಒಂದು ಕಡೆ ವಸೂಲಾಗುವುದನ್ನು ಈ ರೀತಿಯಾಗಿ ಖರ್ಚು ಮಾಡುತ್ತೀರೆಂದರೆ ಹೇಗೆ? ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಸ್ಕೋಪ್ ಇಲ್ಲ. ಇದರಲ್ಲಿರತಕ್ಕಂಥ ಲೋಪದೋಷಗಳ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, 2008–09ನೇ ಸಾಲಿನ ಪೂರಕ ಅಂದಾಜಿನ ಮೊತ್ತ 6207.44 ಕೋಟಿ. ಇದರಲ್ಲಿ 3492.48 ಕೋಟಿ ರೂಪಾಯಿಗಳ ರಾಜಸ್ವ ವೆಚ್ಚ ಮತ್ತು 2704.96 ಕೋಟಿ ಬಂಡವಾಳ ವೆಚ್ಚ. ಇದು ತಮಗೂ ಕೂಡ ಗೊತ್ತಿದೆ. ಈ ಪೂರಕ ಅಂದಾಜಿನಲ್ಲಿ 324.05 ಕೋಟಿ ಕೇಂದ್ರ ಸರ್ಕಾರದ ಅನುದಾನವನ್ನು ಆಯವ್ಯಯದಲ್ಲಿ ಸೇರಿಸಲು ಒದಗಿಸಿದೆ. ಒಟ್ಟಾರೆಯಾಗಿ 2264.27 ಕೋಟಿ ರೂಪಾಯಿಯನ್ನು ಹೊಂದಾಣಿಕೆಯಲ್ಲಿ ಒದಗಿಸಲಾಗಿದೆ. ಆದ್ದರಿಂದ, ವಾಸ್ತವವಾಗಿ ಸಂಚಿತ ನಿಧಿಯಿಂದ ಹೊರ ಹರಿವಿನ ಮೊತ್ತ 3619.12 ಕೋಟಿ ಆಗಿದೆ. ಆದ್ದರಿಂದ ಒಟ್ಟು ಮೊತ್ತವಾದ 6027.44 ಕೋಟಿಗೆ ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

" 2009ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 1 ರಿಂದ 3 ರವರೆಗೆ

ಅಧ್ಯಕ್ಷರು : "ಖಂಡ 1 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 1 ರಿಂದ 3 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

" 2009ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ತಿದ್ದುಪಡಿ ಮಾಡಿರವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ಸೂಚಿಸಲಾಯಿತು.

ಅಧ್ಯಕ್ಷರು :– ಈಗ ಸದನವನ್ನು ಸಂಜೆ 5.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 3ಗಂಟೆ 49 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಸಂಜೆ 5.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನ ಪುನಃ ಸಂಜೆ 5.20 ಗಂಟೆಗೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು : ಪ್ರಶ್ನೋತ್ತರಕ್ಕೆ ಹೋಗುವ ಮುಂಚೆ ನಾನು ಸದನದಲ್ಲಿ ಒಂದು ನಿರ್ಣಯವನ್ನು ಕೊಡುತ್ತಿದ್ದೇನೆ.

5. <u>ಸಭಾಧ್ಯಕ್ಷರ ನಿರ್ಣಯ</u>

ವಿಷಯ : "ಶ್ರೀ ವೈ.ಸಂಪಂಗಿ, ವಿಧಾನಸಭಾ ಸದಸ್ಯರು, ಕೆ.ಜಿ.ಎಫ್, ವಿಧಾನ ಸಭಾ ಕ್ಷೇತ್ರ ಇವರ ವಿರುದ್ಧ ದಾಖಲಾದ ಲಂಚ ಪ್ರಕರಣದ ಕುರಿತು"

ಸದರಿ ಪ್ರಕರಣದ ಕುರಿತು ಇಂದು ಇಡೀ ರಾಜ್ಯದಲ್ಲಿ ಚರ್ಚೆ ನಡೆಯುತ್ತಿದೆ. ಒಬ್ಬ ಶಾಸಕರ ಮೇಲೆ ಲಂಚ ಹಣ ಸ್ವೀಕರಿಸಿದ ಸಂಬಂಧ ಲೋಕಾಯುಕ್ತರು ದಾಳಿ ಮಾಡಿ ಬಂಧಿಸಿ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿರುವ ಪ್ರಕರಣ ರಾಜ್ಯದ ಇತಿಹಾಸದಲ್ಲಿಯೇ ಪ್ರಪ್ರಥಮವಾದುದು ಅಂಥ ಹೇಳಬಹುದು.

ಕರ್ನಾಟಕ ಲೋಕಾಯುಕ್ತರು ಬೆಂಗಳೂರು ನಗರ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ನಂ.8/2009 ಕಲಂ 7, 13 (1) (ದಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ 1988ರ ಅನ್ವಯ ಪಿರ್ಯಾದುರರಾದ ಶ್ರೀ.ಹುಸೇನ್ ಮೊಹೀನ್ ಫಾರೂಖ್ ರವರ ಪಿರ್ಯಾದಿನ ಮೇಲೆ ಪ್ರಕರಣ ದಾಖಲು ಮಾಡಿಕೊಂಡು ದಿನಾಂಕ 29–1–2009ರಂದು ಲೋಕಾಯುಕ್ತ ಪೊಲೀಸರು ಆರೋಪಿತರಾದ ಶ್ರೀ.ವೈ.ಸಂಪಂಗಿ, ವಿಧಾನ ಸಭಾ ಸದಸ್ಯರು, ಕೆ.ಜಿ.ಎಫ್.ವಿಧಾನ ಸಣಾ ಕ್ಷೇತ್ರ ಇವರನ್ನು ಲಂಚ ಹಣ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಗೆ ನೇರವಾಗಿ ಸಿಕ್ಕಿ ಬಿದ್ದಿದ್ದು, ಆರೋಪಿತರನ್ನು ದಸ್ತಗಿರಿ ಮಾಡಲಾಗಿದೆ ಎಂದು ಲೋಕಾಯುಕ್ತ ಕಛೇರಿಯಿಂದ ನಮ್ಮ ಕಛೇರಿಗೆ ದಿನಾಂಕ 29–1–2009ರಂದು ಕಳುಹಿಸಿದ ಮಾಹಿತಿಯ ಮೇರೆಗೆ ತಿಳಿದು ಬಂದಿದೆ.

ಈ ಘಟನೆಯ ನಂತರ ಇಡೀ ಸಾರ್ವಜನಿಕ ವಲಯದಲ್ಲಿ ಮತ್ತು ಮಾಧ್ಯಮದಲ್ಲಿ ಸಾರ್ವಜನಿಕ ಜೀವನದಲ್ಲಿ ಇರತಕ್ಕ ವ್ಯಕ್ತಿಗಳ ಬಗ್ಗೆ ಅದರಲ್ಲೂ ಜನಪ್ರತಿನಿಧಿಗಳ ಬಗ್ಗೆ ಸಾಕಷ್ಟು ಚರ್ಚೆಗಳಾದವು. ಅಷ್ಟೇ ಅಲ್ಲ ಈಗ ನಡೆಯುತ್ತಿರುವ ಅಧಿವೇಶನ ಸಂದರ್ಭದಲ್ಲಿ ದಿನಾಂಕ 24–2–2009ರಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಗೌರವಾನ್ವಿತ ಸದಸ್ಯರು ಈ ವಿಷಯವನ್ನು